**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೆರಡನೆಯ ಅಧಿವೇಶನ**

# ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–4)**

**(ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 2ನೇ ಪ್ರಕರಣದಲ್ಲಿ ಖಂಡ (ಇ1) ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ1) "ಸಹಕಾರ ಚುನಾವಣಾ ವಿಭಾಗ" ಎಂದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 39ಎಎ ಪ್ರಕರಣದಡಿ ಸೃಜಿಸಲಾದ ಮತ್ತು ಕರ್ನಾಟಕ ಸಹಕಾರ ಸಂಘಗಳ ರಿಜಿಸ್ಟ್ರಾರ್ ನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸುವ ಸಹಕಾರ ಚುನಾವಣಾ ವಿಭಾಗ".

**3. 20ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 20ಬಿ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿನ (ಸಿ) ಖಂಡದಲ್ಲಿರುವ ಪರಂತುಕವನ್ನು ಹೊರತುಪಡಿಸಿ ಉಪಖಂಡ (i) ಮತ್ತು (ii)ನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಈ ಅಧಿನಿಯಮ ಅಥವಾ ಉಪ ವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಮಾಧ್ಯಮಿಕ ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಅಥವಾ ಅಪೆಕ್ಸ್ ಸಹಕಾರಿಗಳ ಮಂಡಳಿಯ ಚುನಾವಣೆಯಲ್ಲಿ ಮೀಸಲಾತಿ ಸ್ಥಾನಗಳಿಗೆ, ಸದರಿ ಸಹಕಾರಿಗಳ ಯಾವುದೇ ಮತದಾರರ ವರ್ಗದವರಾದರೂ ನಿಯಮಿಸಬಹುದಾದ ವಿಧಾನದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರತಕ್ಕದ್ದು."

**4. 24ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದಲ್ಲಿ,-

(i) ಮೊದಲನೇ ಪರಂತುಕದಲ್ಲಿ ಬರುವ "ಬಿಡಿ ವ್ಯಕ್ತಿಗಳನ್ನು ಸದಸ್ಯರಾಗಿ ಉಳ್ಳ" ಹಾಗೂ "ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) ಹಾಗೆ ತಿದ್ದುಪಡಿ ಮಾಡಿದ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಪ್ರಾಥಮಿಕ ಸಹಕಾರಿಯ ಸಂದರ್ಭದಲ್ಲಿ ಅಂಥ ವರ್ಗದ ಅಥವಾ ಗುಂಪಿನ ಸದಸ್ಯರನ್ನು ಹೊಂದಿದ್ದಲ್ಲಿ ಮಾತ್ರ ಆಡಳಿತ ಮಂಡಳಿಯಲ್ಲಿ ಅಂಥ ಮೀಸಲಾತಿಯನ್ನು ಕಲ್ಪಿಸತಕ್ಕದ್ದು:

ಮತ್ತು ಪರಂತು ಮಾಧ್ಯಮಿಕ ಸಹಕಾರಿ, ಸಂಯುಕ್ತ ಸಹಕಾರಿ ಮತ್ತು ಅಪೆಕ್ಸ್ ಸಹಕಾರಿ ಆಡಳಿತ ಮಂಡಳಿಯಲ್ಲಿ ಮೀಸಲಾತಿ ಸ್ಥಾನಗಳಿಗೆ ಅವಕಾಶ ಕಲ್ಪಿಸಲು ಮಂಡಳಿಯ ಸದಸ್ಯರ ಸಂಖ್ಯೆಯ ಗರಿಷ್ಟ ಪ್ರಮಾಣವು 24ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಗತ್ಯಬಿದ್ದರೆ, ಸರ್ಕಾರದ ಪೂರ್ವಾನುಮೋದನೆಯೊಂದಿಗೆ

ಗರಿಷ್ಟ ಸಂಖ್ಯೆಯನ್ನು ಆಯಾ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಿಗದಿಪಡಿಸಿಕೊಳ್ಳತಕ್ಕದ್ದು:

(iii) ಅಸ್ತಿತ್ವದಲ್ಲಿರುವ ಎರಡನೇ ಪರಂತುಕದಲ್ಲಿ "ಮತ್ತು ಪರಂತು" ಎಂಬ ಪದಗಳ ಬದಲಿಗೆ "ಅಲ್ಲದೆ ಪರಂತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 26ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 26ನೇ ಪ್ರಕರಣದಲ್ಲಿ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚುನಾವಣೆ ನಡೆಸುವ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾದಂತೆ ಇರತಕ್ಕದ್ದು."

**6. 28ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 28ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಮುಖ್ಯ ಕಾರ್ಯನಿರ್ವಾಹಕನು ಮಂಡಳಿಯ ರಚನೆಯಾದ ದಿನಾಂಕದಿಂದ ಅಥವಾ ಸಮಾನ್ಯ ಚುನಾವಣೆಯ ನಂತರ ಮಂಡಳಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್)ಯ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್) ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಮಂಡಳಿಯ ಎಲ್ಲಾ ಸದಸ್ಯರ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್)ಯ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಳಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪ ಚೇರ್‌ಪರ್ಸನ್), ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಳಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (1)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ವಿಭಾಗಕ್ಕೆ ಕಳುಹಿಸತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (1) ಮತ್ತು (2)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ವಿಭಾಗ ಅಥವಾ ಸಭೆಯನ್ನು ಕರೆಯಲು ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

(ii) ಹಾಗೆ ಪ್ರತಿಯೋಜಿಸಲಾದ ಉಪಪ್ರಕರಣ (1), (2), (3) ಮತ್ತು (4)ರ ತರುವಾಯ ಅಸ್ತಿತ್ವದಲ್ಲಿರುವ ಉಪಪ್ರಕರಣಗಳಾದ (2) ಮತ್ತು (3)ನ್ನು ಉಪಪ್ರಕರಣ (5) ಮತ್ತು (6)ಗಳೆಂದು ಮರುಸಂಖ್ಯೆ ನೀಡತಕ್ಕದ್ದು.

**7. 29ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 29ನೇ ಪ್ರಕರಣದಲ್ಲಿ,-

(i) "ಭರ್ತಿ ಮಾಡಿಕೊಳ್ಳಬಹುದು" ಎಂಬ ಪದಗಳ ಬದಲಾಗಿ "ಭರ್ತಿ ಮಾಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಮಂಡಳಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

**8. 33ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅರ್ಬನ್ ಕೋ ಅಪರೇಟಿವ್ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರಿಯು ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆಯ

ಲೆಕ್ಕಪರಿಶೋಧಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು."

**9. 54ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 54ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಮೂರನೇ ಪರಂತುಕದ ತರುವಾಯ ಈ ಮುಂದಿನದನ್ನುಸೇರಿಸತಕ್ಕದ್ದು, ಎಂದರೆ:-

"(2-ಎ) ಮಂಡಳಿಯಲ್ಲಿ ಗರಿಷ್ಠ ಸದಸ್ಯರ ಸಂಖ್ಯೆ ಮತ್ತು ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದ 24ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು."

**10. 58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 58ನೇ ಪ್ರಕರಣದ (4)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಮುಖ್ಯ ಕಾರ್ಯನಿರ್ವಾಹಕನು ಮಂಡಳಿಯ ರಚನೆಯಾದ ದಿನಾಂಕದಿಂದ ಅಥವಾ ಸಮಾನ್ಯ ಚುನಾವಣೆಯ ನಂತರ ಮಂಡಳಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್)ಯ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್) ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಮಂಡಳಿಯ ಎಲ್ಲಾ ಸದಸ್ಯರ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪಚೇರ್‌ಪರ್ಸನ್)ಯ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಳಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(6) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪ ಚೇರ್‌ಪರ್ಸನ್) ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಳಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (5)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(7) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ವಿಭಾಗಕ್ಕೆ ಕಳುಹಿಸತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (5) ಮತ್ತು (6)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ವಿಭಾಗ ಅಥವಾ ಸಭೆಯನ್ನು ಕರೆಯಲು ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

**11. 59ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 59ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**12. ಪದಾವಳಿಯ ಪ್ರತಿಯೋಜನೆ.-** ಮೂಲ ಅಧಿನಿಯಮದಲ್ಲಿ "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳು ಬರುವ ಕಡೆಗಳಲೆಲ್ಲಾ "ಸಹಕಾರ ಚುನಾವಣಾ ವಿಭಾಗ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಈ ಕೆಳಕಂಡವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

1. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ 20ಬಿ ಪ್ರಕರಣದ ಉಪಪ್ರಕರಣ (1)ರ (ಸಿ) ಖಂಡದ ಉಪಪ್ರಕರಣ (i) ಮತ್ತು (ii)ರ ಉಪಬಂಧಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಸಂಖ್ಯಾತ ರಿಟ್ ಅರ್ಜಿಗಳು ದಾಖಲಾಗಿವೆ ಮತ್ತು ಮಾನ್ಯ ಉಚ್ಚ ನ್ಯಾಯಾಲಯವು ಎಲ್ಲಾ ಅರ್ಜಿಗಳಲ್ಲಿನ ಅರ್ಜಿದಾರರಿಗೆ ಮತದಾನ ಮಾಡಲು ಅನುಮತಿಸಿರುತ್ತದೆ. ಆದ್ದರಿಂದ ಎಲ್ಲಾ ಸದಸ್ಯರಿಗೆ ಮತದಾನ ಮಾಡುವುದನ್ನು ಖಾತರಿಪಡಿಸಲು ಈ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ.

2. ಎರಡನೇ ಆಡಳಿತ ಸುಧಾರಣೆಗಳ ಆಯೋಗದ ವರದಿಯ ಶಿಫಾರಸ್ಸಿಗನುಸಾರವಾಗಿ ಮತ್ತು ಸಹಕಾರಿ ಚುನಾವಣಾ ಪ್ರಾಧಿಕಾರದ ನಿರ್ವಹಣೆಗಾಗಿ ಭರಿಸಲಾದ ಹೆಚ್ಚುವರಿ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸಹಕಾರಿ ಚುನಾವಣಾ ಪ್ರಾಧಿಕಾರವನ್ನು ರದ್ದುಪಡಿಸಿ, ರಿಜಿಸ್ಟ್ರಾರ್ ನಿಯಂತ್ರಣದಡಿಯಲ್ಲಿ ಸಹಕಾರ ಚುನಾವಣಾ ವಿಭಾಗವನ್ನು ಸೃಜಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 39ಎಎ-ಗೆ ತಿದ್ದುಪಡಿ ತರುವ ತತ್ಪರಿಣಾಮವಾಗಿ 26ಎ ಪ್ರಕರಣಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

3. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 24 (1) (ಇ)ರಲ್ಲಿ ಪ್ರಾಥಮಿಕ ಸಹಕಾರಿಗಳ ಮಂಡಳಿಯಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿ ಬುಡಕಟ್ಟುಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ ಈಗಾಗಲೇ ಮಿಸಲಾತಿಯನ್ನು ಕಲ್ಪಿಸಲಾಗಿದೆ. ಅದಕ್ಕನುಸಾರವಾಗಿ, ಪೂರಕ ಸಹಕಾರಿ, ಸಂಯುಕ್ತ ಸಹಕಾರಿ ಮತ್ತು ಅಪೆಕ್ಸ್ ಸಹಕಾರಿಗಳ ಮಂಡಳಿಯಲ್ಲಿ ಪ್ರಾತಿನಿಧ್ಯ ಹೊಂದಿರದ ವರ್ಗದ ಅಥವಾ ಸಮುದಾಯದ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ಸದುದ್ದೇಶದಿಂದ ಈ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ- 3** | ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 20-ಬಿ ಪ್ರಕರಣದ (2)ನೇ ಉಪಪ್ರಕರಣವು, ಮೀಸಲಾತಿ ಸ್ಥಾನಗಳಿಗಾಗಿ ಸಹಕಾರಿಗಳ ಮಂಡಳಿಯ ಚುನಾವಣೆಯಲ್ಲಿ ಮತದಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ- 5** | ಈ ಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 26ನೇ ಪ್ರಕರಣದ (4)ನೇ ಉಪಪ್ರಕರಣವು, ಚುನಾವಣೆಗಳನ್ನು ನಡೆಸುವುದಕ್ಕಾಗಿ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ- 6** | ಈ ಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 28ನೇ ಪ್ರಕರಣದ (1)ನೇ ಉಪಪ್ರಕರಣವು,-<br>(i) ಸಾರ್ವತ್ರಿಕ ಚುನಾವಣೆಯ ತರುವಾಯ ಮೊದಲ ಸಭೆಯನ್ನು ಕರೆಯುವ ಕಾರ್ಯವಿಧಾನವನ್ನು ನಿಯಮಿಸುವ ಕುರಿತು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) ಸಾರ್ವತ್ರಿಕ ಚುನಾವಣೆಯ ತರುವಾಯ ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪ ಚೇರ್‌ಪರ್ಸನ್) ಮತ್ತು ಇತರ ಪದಾಧಿಕಾರಿಗಳನ್ನು ಚುನಾಯಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ- 10** | ಈ ಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 58ನೇ ಪ್ರಕರಣದ (5)ನೇ ಉಪಪ್ರಕರಣವು,-<br>(i) ಮಂಡಳಿ ರಚನೆಯ ತರುವಾಯ ಸಭೆಯನ್ನು ಕರೆಯುವ ಕುರಿತು ಕಾರ್ಯವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) ಸಾಮಾನ್ಯ ಚುನಾವಣೆಯ ತರುವಾಯ ಅಧ್ಯಕ್ಷ ಅಥವಾ ಸಭಾಪತಿ (ಚೇರ್‌ಪರ್ಸನ್), ಉಪಾಧ್ಯಕ್ಷ ಅಥವಾ ಉಪ ಸಭಾಪತಿ (ಉಪ ಚೇರ್‌ಪರ್ಸನ್) ಮತ್ತು ಇತರ ಪದಾಧಿಕಾರಿಗಳನ್ನು ಚುನಾಯಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಕ್ಯಾತಸಂದ್ರ ಎನ್. ರಾಜಣ್ಣ**
ಸಹಕಾರ ಮಂತ್ರಿ
ಕೃಷಿ ಮಾರುಕಟ್ಟೆ ಹೊರತುಪಡಿಸಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997**

**(2000ರ ಕರ್ನಾಟಕ ಅಧಿನಿಯಮ 17)ರ ಉದ್ಧೃತ ಭಾಗ**

**XX XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

**XX XX XX**

(ಇ1) 'ಸಹಕಾರಿ ಚುನಾವಣಾ ಪ್ರಾಧಿಕಾರ' ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 39ಎಎ ಪ್ರಕರಣದ ಅಡಿಯಲ್ಲಿ ರಚಿತವಾದ ಸಹಕಾರಿ ಚುನಾವಣಾ ಪ್ರಾಧಿಕಾರ.

**XX XX XX**

**20ಬಿ. ಸದಸ್ಯರ ಮತದಾನದ ಹಕ್ಕು.-** ಯಾರೇ ಸದಸ್ಯನು,-

(ಎ) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂರ್ರ್ಯಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ;

(ಬಿ) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ;

(ಸಿ) (i) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ;

(ii) ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಟ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ;

- ವ್ಯವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,

- ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳಿಸತಕ್ಕದ್ದು:

ಪರಂತು ಸಹಕಾರಿಯು ಹೊಸದಾಗಿ ನೋಂದಣಿಗೊಂಡ ತರುವಾಯ ಕೂಡಲೇ ನಡೆಯುವ ಸಹಕಾರಿಯ ಆಡಳಿತ ಮಂಡಳಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಮತ್ತು ಪ್ರಥಮ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯನಿಗೆ (ಎ) ಖಂಡದಲ್ಲಿನ ನಿರ್ಬಂಧವು ಅನ್ವಯವಾಗತಕ್ಕದ್ದಲ್ಲ.

**XX XX XX**

**24. ಮಂಡಲಿಯ ರಚನೆ.-** ಪ್ರತಿಯೊಂದು ಸಹಕಾರಿಯ ಮಂಡಲಿಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಹದಿಮೂರಕ್ಕಿಂತ ಕಡಿಮೆಯಿಲ್ಲದ, ಆದರೆ ಕೆಳಗೆ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ ಚುನಾಯಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(1) ಪ್ರಾಥಮಿಕ ಸಹಕಾರಿಯ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು,-

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಡಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಇ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು:

ಪರಂತು, ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಪ್ರತಿಯೊಂದು ಸಹಕಾರಿಯ ಮಂಡಲಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು, ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು ಸಹ ಅವಶ್ಯವಿದ್ದಲ್ಲಿ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು ಸಹ ಅವಶ್ಯವಿದ್ದಲ್ಲಿ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು.

**XX XX XX**

**26 ಮಂಡಲಿಯ ಚುನಾವಣೆ.-** (1)- ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಚುನಾವಣೆಯನ್ನು ಸಹಕಾರಿ ಚುನಾವಣಾ ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(3) ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು.

**XX XX XX**

**28. ಪದಾಧಿಕಾರಿಗಳನ್ನು ಚುನಾಯಿಸುವುದು.-** (1) ಮಂಡಲಿಯ ಚುನಾವಣೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿ ಚುನಾವಣಾ ಪ್ರಾಧಿಕಾರವು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳನ್ನು ಚುನಾಯಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

(2) ಅಧ್ಯಕ್ಷ ಅಥವಾ ಸಭಾಪತಿ ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷ ಅಥವಾ ಉಪಸಭಾಪತಿಯು,-

(ಎ) ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು;

(ಬಿ) ಪದಾಧಿಕಾರಿಗಳ ಚುನಾವಣೆಯನ್ನು ಬಿಟ್ಟು ಉಳಿದೆಡೆ ಮಂಡಲಿಯು ತೀರ್ಮಾನಿಸಬೇಕಾದ ಯಾವುವೇ ವಿಷಯಗಳ ಮೇಲೆ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಮಾತ್ರ ನಿರ್ಣಾಯಕ ಮತ ಚಲಾಯಿಸತಕ್ಕದ್ದು:

ಪರಂತು, ಪದಾಧಿಕಾರಿಗಳ ಚುನಾವಣೆಯಲ್ಲಿ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಚೀಟಿಯನ್ನು ಎತ್ತುವ ಮೂಲಕ ಚುನಾಯಿಸತಕ್ಕದ್ದು; ಮತ್ತು

(ಸಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಅಥವಾ ಮಂಡಲಿಯು ಪ್ರತ್ಯಾಯೋಜಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು.

ಪರಂತು ಸಂಯುಕ್ತ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಆತನು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ, ಮುಕ್ತಾಯಗೊಳಿಸತಕ್ಕದ್ದು.

**XX XX XX**

**29 ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು.-** ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ, ಆಡಳಿತ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಗಳನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು.

**XX XX XX**

**33 ಸಹಕಾರಿಯ ಲೆಕ್ಕಪರಿಶೋಧನೆ-** (1) ಪ್ರತಿಯೊಂದು ಸಹಕಾರಿಯು ಕನಿಷ್ಟ ವರ್ಷಕ್ಕೊಮ್ಮೆಯಾದರು ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆ ಮಾಡಿಸತಕ್ಕದ್ದು.

ಪರಂತು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ರಾಜ್ಯದಲ್ಲಿರುವ ಸಹಕಾರಿಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವಗಳನ್ನು ಹೊಂದಿರುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಸಕ್ಷಮನಾದ ಪ್ರಾಧಿಕಾರವಾಗಿರತಕ್ಕದ್ದು.

**XX XX XX**

**58 ಚುನಾವಣೆಗಳು.–** (1) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಮತ್ತು ಪದಾಧಿಕಾರಿಗಳ ಪದಕ್ಕೆ ಚುನಾವಣೆ ನಡೆಸುವುದು ಸಹಕಾರ ಚುನಾವಣಾ ಆಯೋಗದ ಜವಾಬ್ದಾರಿಯಾಗಿರತಕ್ಕದ್ದು.

(2) ನಿರ್ಗಮಿಸುತ್ತಿರುವ ಮಂಡಲಿಯ ಸದಸ್ಯರ ಪದಾವಧಿಯು ಮುಕ್ತಾಯದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ಪದಗ್ರಹಣ ಮಾಡಲು ಅನುವಾಗುವಂತೆ ನಿರ್ಗಮಿಸುತ್ತಿರುವ ಮಂಡಲಿಯ ಅವಧಿಯು ಕೊನೆಗೊಳ್ಳುವ ನಿಕಟಪೂರ್ವದಲ್ಲಿ ಹೊಸ ಮಂಡಲಿಯ ಸದಸ್ಯರ ಚುನಾವಣೆ ನಡೆಸತಕ್ಕದ್ದು.

(3) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ನಿರ್ದೇಶಕರು ಪದಗ್ರಹಣ ಮಾಡತಕ್ಕದು.

(4) ಸಹಕಾರ ಚುನಾವಣಾ ಆಯೋಗಕ್ಕೆ ಸಂಬಂಧಿಸಿದಂತೆ 26ಎ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು

**XX XX XX**

**59 ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು.-** ಮರಣ, ರಾಜೀನಾಮೆ, ಅನರ್ಹತೆಯ ಕಾರಣದಿಂದ ಅಥವಾ ಇತರ ಯಾವುದೇ ಕಾರಣದಿಂದಾಗಿ ಆಡಳಿತ ಮಂಡಲಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆಡಳಿತ ಮಂಡಲಿಯ ಸಭೆಯನ್ನು ನಡೆಸಲು ಕೋರಂ ಇದ್ದಲ್ಲಿ, ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮಕರಣ ಮಾಡುವ ಮೂಲಕ ಭರ್ತಿಮಾಡಿಕೊಳ್ಳಬಹುದು:

ಪರಂತು ಮಂಡಲಿಯ ಅವಧಿಯು ಮೂಲ ಪಧಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ ಆಕಸ್ಮಿಕ ರಿಕ್ತತೆಯನ್ನು ಸಹಮತದಿಂದ ಭರ್ತಿ ಮಾಡಬಹುದು

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 14ನೇ ಫೆಬ್ರವರಿ 2023

**KARNATAKA LEGISLATIVE COUNCIL**
**ONE HUNDRED AND FIFTY SECOND SESSION**

# THE KARNATAKA SOUHARDA SAHAKARI (AMENDMENT) BILL, 2024

**(LA Bill No. 4 of 2024)**

**(As passed by the Karnataka Legislative Assembly with Amendment)**

A Bill further to amend the Karnataka Souharda Sahakari Act, 1997.

Whereas, it is expedient further to amend the Karnataka Souharda Sahakari Act, 1997 (Karnataka Act 17 of 2000) for the purposes hereinafter appearing.

Be it enacted by the Karnataka State legislature in the seventy fifth year of the republic of India, as follows:-

**1. Short title and Commencement.-** (1) This Act may be called the Karnataka Souharda Sahakari (Amendment) Act, 2024.

(2) It shall come into force at once.

**2. Amendment of section 2.-** In the Karnataka Souharda Sahakari Act, 1997 (Karnataka Act 17 of 2000) (herein after referred to as the Principal Act) in section 2, for clause (e1),the following shall be substituted, namely:-

**“(e1)** “**Co-Operative Election Wing’**” means “Co-Operative Election Wing’ created under section 39AA of the Karnataka Co-operative Societies Act, 1959 and working under the control of the Registrar of the Karnataka Co-operative Societies”.

**3. Amendment of section 20B.-** In section 20B of the Principal Act,-

(i) in sub-section (1), in clause (c), sub clauses (i) and (ii) except the proviso, shall be omitted; and

(ii) after sub-section (1), the following shall be inserted namely:-

“(2) Notwithstanding anything contained in this Act or Bye-laws, in the Election of the Board of Secondary Co-operative or Federal Co-operative or Apex Co-operative to the reserved seats, irrespective of any class of voters of the said Co-operatives they shall be entitled to exercise their votes, in the manner as may be prescribed.”

**4. Amendment of section 24.-** In section 24 of the Principal Act, in clause (1), -

(i) in the first proviso the words “consisting of individuals as members and having members from such class or category of persons” shall be omitted;

(ii) after the proviso as so amended, the following proviso shall be inserted, namely:-

“Provided further that, in case of primary co-operative, such reservation shall be made in the board having members from such class or category of persons.

Provided also that, respective Co-operative shall make provisions in the bye-laws with previous approval of the Government to enable reservations of seats in the

board of secondary Co-operative, federal Co-operative and apex Co-operative if their number of members exceeds the limit as specified in sub-section (1) of section 24."

(iii) in the existing second proviso, for the words " Provided further" the words "Provided also" shall be substituted.

**5. Amendment of section 26.-** In section 26 of the Principal Act, after sub-section(3), the following shall be inserted, namely:-

"(4) Subject to the provisions of this Act, the procedure and guidelines for conduct of election shall be as may be prescribed."

**6. Amendment of section 28.-** In section 28 of the Principal Act,-

(i) for sub-section(1), the following shall be substituted, namely:-

"(1) The Chief Executive shall within fifteen days from the date of constitution or deemed constitution of the Board after a general election and immediately before the expiry of the term of office of the President or Chairperson, Vice-President, Vice-Chairperson, convene a meeting in the prescribed manner of all members of the committee for the purpose of electing President or Chairperson, Vice-President, Vice-chairperson and such other office bearers as are required to be elected under the bye-laws of the co-operative. One of the members who is not a candidate for the election of President or Chairperson, Vice-president, Vice-Chairperson shall be chosen to preside over such meeting:

Provided that, the Members of the first Board elected in the first general meeting held after the registration of a co-operative, shall elect the President or Chairperson, Vice-President or Vice-Chairperson and other office bearers in such manner as may be prescribed.

(2) The Chief Executive shall, as and when there is a casual vacancy in the office of the President or Chairperson, Vice-President or Vice- Chairperson or other office bearers convene a meeting of the members of the Board for the purpose of filling up the casual vacancy and the provisions of sub-section (1) shall mutatis mutandis apply.

(3) The Chief Executive shall, within three days from the date of the meeting, forward to the Registrar and Co-operative election wing a copy of the notice convening the meeting and also a copy of the proceedings of the meeting.

(4) If the Chief Executive fails to convene the meeting in accordance with sub-section (1) and (2), the Co-operative election wing or any officer authorized by it to do so shall convene a meeting for the purposes specified in the said sub-sections."

(ii) After sub-sections (1), (2) (3) and (4) so substituted, the existing sub-sections (2) and (3) shall be re-numbered as (5) and (6).

**7. Amendment of section 29.-** In section 29 of the Principal Act,-

(i) for the words " may fill" the words "shall fill" be substituted; and

(ii) the words "if the remaining term of office of the board is less than half of its original term" shall be omitted.

**8. Amendment of section 33.-** In section 33 of the Principal Act, after sub-section (1), the following shall be inserted, namely:-

"(1-A) Notwithstanding anything contained in sub-section (1), except urban co-operative banks, once in every three years every co-operative shall get its accounts audited by the Auditor of Co-operative Audit Department."

**9. Amendment of Section 54.-** In section 54 of the Princpal Act, , in sub-section (2) after third proviso, the following shall be inserted namely:-

"(2-A) The provisions of section 24 related to the Maximum number of members and reservation of seats in the Board shall mutatis-mutandis apply to the Federal Co-operative."

**10. Amendment of section 58.-** In section 58 of the Principal Act, after sub-section (4), the following shall be inserted, namely:-

"(5) The Chief Executive shall, within fifteen days from the date of constitution or deemed constitution of the Board after a general election and immediately before the expiry of the term of office of the President or Chairperson, Vice-President, Vice-Chairperson, convene a meeting in the prescribed manner of all the members of the committee for the purpose of electing President or Chairperson, Vice-President, Vice-chairperson and such other office bearers as are required to be elected under the bye-laws of the federal co-operative. One of the members who is not a candidate for the election of President or Chairperson, Vice-president, Vice-Chairperson shall be chosen to preside over such meeting:

Provided that, the Members of the first Board elected in the first general meeting held after the registration of a co-operative shall elect the President or Chairperson, Vice-President or Vice-Chairperson and other office bearers in such manner as may be prescribed.

(6) The Chief Executive shall, as and when there is a casual vacancy in the office of the President or Chairperson, Vice-President or Vice-Chairperson or other office bearers, convene a meeting of the members of the Board for the purpose of filling up the casual vacancy and the provisions of sub-section (5) shall mutatis mutandis apply.

(7) The Chief Executive shall within three days from the date of the meeting, forward to the Registrar and Co-operative election wing a copy of the notice convening the meeting and also a copy of the proceedings of the meeting.

(8) If the Chief Executive fails to convene the meeting in accordance with sub-sections (5) and (6), the Co-operative election wing or any officer authorized by it to do so, shall convene a meeting for the purposes specified in the said sub-sections.

**11. Amendment of section 59.-** In section 59 of the Principal Act, the proviso shall be omitted.

**12. Substitution of expression.-** In the Principal Act, for the words "cooperative election authority" wherever they occur the words "Co-operative Election Wing" shall be substituted.

## STATEMENT OF OBJECTS AND REASONS

**(As appended to at the time of introduction)**

It is considered necessary to further amend the Karnataka Souharda Sahakari Act 1997 (Karnataka Act No.17 of 2000) to provide for,-

1. Questioning the provisions of section 20B of sub section (1), clause (c), sub clause (i) and (ii) of the Karnataka Souharda Sahakari Act, 1997, a number of Writ Petitions are being filed in the Hon'ble High Court and Hon'ble High Court is allowing the vote to the petitioners in all petitions, so considering the proposed amendment to ensure votes to all members;
2. As per the recommendation of the Second Administrative Reforms Commission, to reduce the additional expenditure incurred on the maintenance of the Co-operative Election Authority, it is proposed to amend section 26-A on the consequence of amendment to section 39-AA of the Karnataka Co-operative Societies Act, 1959 abolishing the Co-operative Election Authority and constituting Co-operative Election Wing under the control of Registrar.
3. In Section 24 (1) (e) of the Karnataka Souharda Sahakari Act, 1997 already there is a provision for reservation for Scheduled Castes/Scheduled Tribes, Backward Classes and Women in the Board of Primary Souharda Co-operative Societies. Accordingly, this amendment has been proposed to bring reservation in the board of secondary cooperative, Federal cooperative and Apex cooperative with the intention of providing social justice.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause-3 | Sub-section (2) of section 20B sought to be inserted under this clause, empowers the State Government to make rules for prescribing the manner of voting in the election of the board of Co-operatives for reserved seats. |
| Clause-5 | Sub-section (4) of section 26 sought to be inserted under this clause, empowers the State Government to make rules regarding prescribing the procedure and guidelines for conduct of elections. |
| Clause-6 | Sub-section (1) of section 28 sought to be substituted under this clause,-<br>(i) Empowers the State Government to prescribe the procedure regarding convening of first meeting after general election; and<br>(ii) Empowers the State Government to make rules regarding electing the President or Chairperson, Vice-President or Vice-Chairperson and other office bearers after general election. |
| Clause-10 | Sub-section (5) of section 58 sought to be inserted under this clause,-<br>(i) Empowers the State Government to prescribe the procedure regarding convening of a meeting after constitution of board; and<br>(ii) Empowers the State Government to make rules regarding electing the President or Chairperson, Vice-President or Vice-Chairperson and other office bearers, after general election. |

The proposed delegation of legislative power is normal in character.

**KYATHASANDRA N.RAJANNA**
Minister for Co-operation
excluding Agriculture Marketing

**K.R. MAHALAKSHMI**
Secretary
Karnataka Legislative Council

**ANNEXURE**
**EXTRACT FROM THE KARNATAKA SOUHARDA SAHAKARI ACT, 1997**
**(KARNATAKA ACT 17 OF 2000)**

**XXX XXX XXX**

**2. Definitions.- XXX XXX XXX**

(e1) 'Cooperative Election Authority' means the cooperative election authority constituted under section 39AA of the Karnataka Co-operative Societies Act, 1959 (Karnataka No. Act 11 of 1959)

**XXX XXX XXX**

**20B. Right of members to vote.-** (1) A Member shall be disqualified to vote for one year in the general meeting or in an election of the members of the board of a co-operative,-

(a) who is admitted as member not less than one year before the date of General meeting or election as the case may be;

(b) who is defaulter for any dues to co-operative;

(c) who has not participated in the management,-

(i) by attending any two out of the last five annual general meetings;

(ii) by utilizing such minimum services or facilities offered by the co-operative as may be specified in the Bye-Laws for any two co-operative years out of the last five co-operative years:

Provided that, the restriction in clause (a) shall not apply to member of a co-operative participating in the first general meeting or first election of newly register co-operative held immediately after its registration.

**XXX XXX XXX**

**24. Constitution of the Board.-** The Board of every cooperative shall consist of not less than thirteen but not exceeding the number of elected members specified below excluding the chief executive namely:-

(1) in case of a primary co-operative and a secondary co-operative whose area of operation extends to,-

(a) a part of taluk, thirteen members;

(b) whole of taluk, fifteen members;

(c) beyond a taluk, seventeen members;

(d) in the case of a union co-operative, nineteen members

(e) in the case of an apex co-operative including the federal co- operative, twenty one members.

Provided that, one seat shall be reserved in favour of members belonging to the scheduled castes and one seat for the members belonging to the scheduled tribes, two seats shall be reserved in favour of women members and two seats shall be reserved in favour of members belonging to backward classes as may be notified by the State Government, on the board of every co-operative consisting of individuals as members and having members from such class or category of persons.

Provided further that every co-operative shall co-opt persons having experience in the field of banking, management, finance or specialization in any other field relating to the objects and activities undertaken by the co-operative, as members of the board of such co-operative and such co-opted members shall not have the right to vote in any election of the co-operative in their capacity as such member or to be eligible to be elected as office bearers of the board.

Provided also that the number of such co-opted members shall not exceed two in addition to twenty one directors specified in sub-section (1).

Provided also that not more than three functional directors if necessary of a cooperative shall also be the members of the board and such members shall be excluded for the purpose of counting the total number of directors specified in the sub-section (1).

**XXX XXX XXX**

**26. Election to the board.-** (1) The election to a board shall be conducted immediately before the expiry of the term of the outgoing board so as to ensure that the newly elected members of the board assume office immediately on the expiry of the term of office of the members of the outgoing board.

(2) The cooperative election authority shall conduct the election to the board of every cooperative.

(3) The newly elected directors of the board shall assume office immediately on the expiry of the term of the outgoing board.

**XXX XXX XXX**

**28. Election of office bearers.-** (1) The co-operative election authority shall take action to conduct election to the office of the President or Chair person, Vice president or Vice Chair person and any other office-bearers to be elected in accordance with the bye-laws within fifteen days from date of election of the board.

(2) The President or Chairperson or in his absence, the Vice President or Vice-Chairperson shall,-

(a) preside over meetings of the Board and the general body;

(b) have only a casting vote in the event of equality of votes on any matters being decided upon by the Board except election to the office bearers:

Provided that in the event of equality of votes in the election of office bearers, the election shall be by drawing lot; and

(c) exercise such other powers as are specified in the bye-laws or as may be delegated by the Board.

(3) The term of office of the President or chair person, vice president or vice chair person and any other office-bearers shall be five years from the date of election and shall be co-terminus with the term of the board.

**XXX XXX XXX**

**29. Filling up of casual vacancies.–** The board may fill up a casual vacancy on the board by nomination out of the same class of members in respect of which the casual vacancy has arisen, if the remaining term of office of the board is less than half its original term.

**XXX XXX XXX**

**33. Audit of Co-operatives .–** (1) Every Cooperative shall get its accounts audited at least once in a year before the first day of September following the close of the cooperative year by an auditor or an auditing firm appointed by the general body of the cooperative from a panel of auditors or auditing firms approved by the Director of cooperative audit;

Provided that, the Director of co-operative audit shall be the authority competent to prepare and maintain a list of auditors and auditing firms who satisfy the prescribed qualification and experience for undertaking the audit of accounts of the co-operatives in the state.

**XXX XXX XXX**

**58. Elections.-** (1) The Cooperative Election Authority shall be responsible for conducting elections to the board and the office of the office bearers of the Federal cooperative.

(2) The election to the board shall be conducted immediately before the expiry of the term of the outgoing board so as to ensure that the newly elected members of the board assume office immediately on the expiry of the term of office of the outgoing board.

(3) The newly elected directors of the board shall assume office immediately on the expiry of the term of the outgoing board.

(4) The provisions of section 26A shall mutatis-mutandis apply in relation to the cooperative election authority.

**XXX XXX XXX**

**59. Filling up of casual vacancies.-** The board may fill up a casual vacancy on the board by virtue of death, resignation, disqualification or any other reason by nomination out of the same class of members in respect of which the casual vacancy has arisen, if there is a quorum.

Provided that, the board may fill up the casual vacancy through co-option only if the remaining term is less than half of the original term of the board.

**XXX XXX XXX**

Govt. Press, Vikasa Soudha, Bengaluru, 14th Feb, 2024, P7, W.D. , Copies 300